


بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–10–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬದರೀ ಸಹಾಬಿಯರಿಗೆ ಸಂಬಂಧಪಟ್ಟು ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಶ್ರೇಷ್ಠತೆಯ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಪೈಗಂಬರ್(ಸ) ಅವರಿಗೆ ನೀಡುತ್ತಿದ್ದ ಸ್ಥಾನದ ಬಗ್ಗೆ ಕೆಲವು ವರದಿಗಳಿವೆ. ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿದ ಒಂದು ಸೌಭಾಗ್ಯ ಮತ್ತು ಶ್ರೇಷ್ಠತೆಯೇನೆಂದರೆ, ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಇದ್ದಾಗ ದಿನಾಲೂ ಒಂದೆರಡು ಬಾರಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಮನೆಗೆ ಹೋಗುತ್ತಿದ್ದರು.

ಹಝ್ರತ್ ಅಮ್ರ್ ಬಿನ್ ಆಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನ್ನನ್ನು ಧ್ಧಾತುಸ್ಸಲಾಸಿಲ್ ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ ನಂತರ ನಾನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದೆನು ಮತ್ತು ಜನರಲ್ಲಿ ನಿಮಗೆ ಯಾರು ಅತ್ಯಂತ ಪ್ರಿಯವೆಂದು ಅವರೊಡನೆ ನಾನು ಕೇಳಿದೆನು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಆಯಿಶ'. ಪುರುಷರಲ್ಲಿ ಯಾರೆಂದು ನಾನು ಕೇಳಿದೆ. ಆಯಿಶರ ತಂದೆಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಯಾರೆಂದು ನಾನು ಕೇಳಿದೆ. ಅನಂತರ ಉಮರ್ ಬಿನ್ ಖತ್ತಾಬ್ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಅವರು ಬೇರೆ ಕೆಲವು ಪುರುಷರ ಹೆಸರುಗಳನ್ನು ಸಹ ಹೇಳಿದರು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಸಲ್ಮಾ ಬಿನ್ ಅಕೂಅ್ ವರದಿ ಮಾಡುತ್ತಾರೆ: ಯಾರಾದರೂ ಪ್ರವಾದಿಯಾಗಿ ಬರುವ ತನಕ ಅಬೂಬಕರ್ ಎಲ್ಲರಿಗಿಂತ ಶ್ರೇಷ್ಠರು ಮತ್ತು ಉತ್ತಮರು ಆಗಿರುವರು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ನನ್ನ ಸಮುದಾಯದವರಲ್ಲಿ ನನ್ನ ಸಮುದಾಯದ ಮೇಲೆ ಅತಿಯಾಗಿ ದಯೆಯುಳ್ಳವರೂ ಕೃಪಾಳೂ ಅಬೂಬಕರ್ ಆಗಿರುವರು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂಸಈದ್(ರ) ಹೇಳುತ್ತಾರೆ: ಆಕಾಶದಲ್ಲಿ ಉದಯಿಸುವ ನಕ್ಷತ್ರಗಳ ಕಡೆಗೆ ನೋಡುವ ರೀತಿಯಲ್ಲಿ ಉನ್ನತ ಸ್ಥಾನದಲ್ಲಿರುವವರನ್ನು ಕೆಳಗಿನ ಸ್ಥಾನದಲ್ಲಿರುವವರು ನೋಡುವರು. ಅಂತಹ ಉನ್ನತ ಸ್ಥಾನದಲ್ಲಿರುವವರಲ್ಲಿ ಅಬೂಬಕರ್ ಮತ್ತು ಉಮರ್ ಒಳಪಟ್ಟಿರುವರು. ಉನ್ನತಿಯಲ್ಲಿರುವ ನಕ್ಷತ್ರಗಳನ್ನು ನೋಡುವ ರೀತಿಯಲ್ಲಿ ಜನರು ಅವರನ್ನು ನೋಡುವರು. ಅವರಿಬ್ಬರೂ ಎಷ್ಟು ಚೆನ್ನ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಪ್ರತಿಯೊಬ್ಬರು ಮಾಡಿದ ಔದಾರ್ಯಕ್ಕೆ ನಾನು ಪ್ರತ್ಯುಪಕಾರವನ್ನು ಮಾಡಿದ್ದೇನೆ, ಅಬೂಬಕರ್‌ರ ಹೊರತು. ನನ್ನ ಮೇಲೆ ಅವರ ಔದಾರ್ಯವಿದೆ. ಅದರ ಪ್ರತಿಫಲವನ್ನು ಅಲ್ಲಾಹನು ಖಿಯಾಮತ್ ದಿನದಂದು ಅವರಿಗೆ ನೀಡುವನು.

ತನ್ನ ರೋಗಾವಸ್ಥೆಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್ ಬಿನ್ ಅಬೂಖಹಾಫರಿಗಿಂತ ಹೆಚ್ಚಾಗಿ ತನ್ನ ಜೀವ ಮತ್ತು ಸಂಪತ್ತಿನಿಂದ ನನ್ನ ಮೇಲೆ ಔದಾರ್ಯ ಮಾಡಿದವರು ಯಾರೂ ಇಲ್ಲ. ಜನರಲ್ಲಿ ಯಾರನ್ನಾದರೂ ನಾನು ನಿಕಟ ಸ್ನೇಹಿತನನ್ನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನೇ ಮಾಡುತ್ತಿದ್ದೆ. ಆದರೆ ಇಸ್ಲಾಮಿನ ಗೆಳೆತನದ ಸಂಬಂಧ ಬಹಳ ಉನ್ನತ ಮಟ್ಟದ್ದಾಗಿದೆ. ಅಬೂಬಕರ್‌ರ ಮನೆಯ ದಿಕ್ಕಿಗೆ ಇರುವ ಕಿಟಕಿಯನ್ನು ಹೊರತುಪಡಿಸಿ ಈ ಮಸೀದಿಯ ಎಲ್ಲ ಕಿಟಕಿಗಳನ್ನು ಮುಚ್ಚಿರಿ.

ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್ ನನ್ನಿಂದ ಮತ್ತು ನಾನು ಅಬೂಬಕರ್‌ರಿಂದ ಆಗಿರುವೆನು. ಅಬೂಬಕರ್ ಇಹಪರ ಲೋಕಗಳಲ್ಲಿ ನನ್ನ ಸಹೋದರರಾಗಿರುವರು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಕುರಿತು ಹಝ್ರತ್ ಪೈಗಂಬರ್(ಸ) ಪ್ರಸ್ತಾಪಿಸಿದ್ದನ್ನು ಹಝ್ರತ್ ಅನಸ್(ರ) ಹೇಳಿದ್ದಾಗಿ ಸುನನ್ ತಿರ್ಮಿಧಿಯಲ್ಲಿ ಹೀಗೆ ವರದಿಯಾಗಿದೆ: ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಹೊರತುಪಡಿಸಿ ಹಿಂದಿನವರಲ್ಲಿ ಮತ್ತು ಮುಂದಿನವರಲ್ಲಿ ಹಿರಿಯರಾದ ಸ್ವರ್ಗವಾಸಿಗಳಿಗೆ ಅವರಿಬ್ಬರೂ ನೇತಾರರಾಗಿರುವರು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಮುಹಾಜಿರ್ ಮತ್ತು ಅನ್ಸಾರ್ ಸಹಾಬಿಯರ ಬಳಿಗೆ ಹಝ್ರತ್ ಪೈಗಂಬರ್(ಸ) ಬರುತ್ತಿದ್ದರು ಮತ್ತು ಅವರ ಜೊತೆಗೆ ಕುಳಿತುಕೊಳ್ಳುತ್ತಿದ್ದರು. ಸಹಾಬಿಯರ ನಡುವೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಇರುತ್ತಿದ್ದರು. ಸಹಾಬಿಯರಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಹೊರತುಪಡಿಸಿ ಯಾರೂ ತಮ್ಮ ದೃಷ್ಟಿಯನ್ನು ಹಝ್ರತ್ ಪೈಗಂಬರ್(ಸ)ರ ಕಡೆಗೆ ಮಾಡುತ್ತಿರಲಿಲ್ಲ. ಅವರಿಬ್ಬರೂ ಹಝ್ರತ್ ಪೈಗಂಬರ್(ಸ)ರನ್ನು ನೋಡುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಬ್ಬರನ್ನು ನೋಡುತ್ತಿದ್ದರು. ಅವರಿಬ್ಬರೂ ಹಝ್ರತ್ ಪೈಗಂಬರ್(ಸ)ರನ್ನು ನೋಡಿ ಮುಗುಳ್ನಗುತ್ತಿದ್ದರು ಹಾಗೆಯೇ ಹಝ್ರತ್ ಪೈಗಂಬರ್(ಸ) ಅವರಿಬ್ಬರನ್ನು ನೋಡಿ ಮುಗುಳ್ನಗುತ್ತಿದ್ದರು.

ಹಝ್ರತ್ ಅಬೂಬಕರ್(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಹಝ್ರತ್ ಇಬ್ನು ಉಮರ್(ರ)ರಿಂದ ವರದಿಯಾಗಿದೆ: ನೀವು ಹೌಝಿನಲ್ಲಿ ನನ್ನ

ಜೊತೆಗಾರರಾಗಿದ್ದೀರಿ ಮತ್ತು ಗುಹೆಯಲ್ಲಿ ನನ್ನ ಜೊತೆಗಾರರಾಗಿದ್ದೀರಿ.

ಹಝ್ರತ್ ಇಬ್ನು ಉಮರ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ದಿನ ಹೊರಗೆ ಬಂದು ಮಸೀದಿಗೆ ಪ್ರವೇಶಿಸಿದರು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ಎಡಬಲ ಭಾಗಗಳಲ್ಲಿ ಇದ್ದರು. ಹಝ್ರತ್ ಪೈಗಂಬರ್(ಸ) ಅವರಿಬ್ಬರ ಕೈಗಳನ್ನು ಹಿಡಿದುಕೊಂಡಿದ್ದರು ಮತ್ತು ಹೀಗೆ ಹೇಳಿದರು: ಈ ರೀತಿಯಾಗಿ ನಾವು ಖಿಯಾಮತಿನ ದಿವಸ ಎಬ್ಬಿಸಲ್ಪಡುವೆವು. ಹಝ್ರತ್ ಅಬ್ದುಲ್ಲಾಹ್ ಬಿನ್ ಹಂತಬ್ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್‌ರನ್ನು ನೋಡಿಕೊಂಡು ಹಝ್ರತ್ ಪೈಗಂಬರ್(ಸ) ಹೇಳಿದರು: ಇವರಿಬ್ಬರೂ ಕಿವಿಗಳು ಮತ್ತು ಕಣ್ಣುಗಳಾಗಿವೆ. ಎಂದರೆ ನನ್ನ ನಿಕಟ ಜೊತೆಗಾರರಾಗಿರುವರು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂಸಈದ್ ಖುದ್‌ರಿ(ರ) ವರದಿ ಮಾಡುತ್ತಾರೆ: ಪ್ರತಿಯೊಬ್ಬ ಪ್ರವಾದಿಗೆ ಆಕಾಶವಾಸಿಗಳಲ್ಲಿ ಮತ್ತು ಭೂಮಿಯ ನಿವಾಸಿಗಳಲ್ಲಿ ಎರಡೆರಡು ಮಂತ್ರಿಗಳಿರುತ್ತಾರೆ. ಆಕಾಶವಾಸಿಗಳಲ್ಲಿ ನನ್ನ ಇಬ್ಬರು ಮಂತ್ರಿಗಳು ಜಿಬ್ರೀಲ್ ಮತ್ತು ಮೀಕಾಯೀಲ್ ಆಗಿರುವರು ಹಾಗೂ ಭೂಮಿಯ ನಿವಾಸಿಗಳಲ್ಲಿ ನನ್ನ ಇಬ್ಬರು ಮಂತ್ರಿಗಳು ಅಬೂಬಕರ್ ಮತ್ತು ಉಮರ್ ಆಗಿರುವರು. ಅದಲ್ಲದೇ ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ) ಸ್ವರ್ಗದ ಸುವಾರ್ತೆಯನ್ನು ಕೂಡ ನೀಡಿದ್ದರು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದ್ ಪರ್ವತವನ್ನು ಏರಿದರು. ಅವರ ಜೊತೆಗೆ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಇದ್ದರು. ಅಷ್ಟರಲ್ಲಿ ಪರ್ವತ ಅಲುಗಾಡಲು ಶುರುವಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಹದ್ ನಿಲ್ಲು, ಏಕೆಂದರೆ ನಿನ್ನ ಮೇಲೆ ಒಬ್ಬ ಪ್ರವಾದಿ, ಒಬ್ಬ ಸಿದ್ದೀಖ್ ಮತ್ತು ಇಬ್ಬರು ಶಹೀದ್ ಹೊರತು ಬೇರೆ ಯಾರೂ ಇಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಒಮ್ಮೆ ಒಂದು ಸಭೆಯಲ್ಲಿ ಸ್ವರ್ಗದ ಮತ್ತು ಅದರ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸಿದರು. ಆಗ ಹಝ್ರತ್ ಅಬೂಬಕರ್(ರ) ಹೀಗೆ ನಿವೇದಿಸಿಕೊಂಡರು: ಹುಝೂರ್, ನಾನು ಸಹ ಸ್ವರ್ಗದಲ್ಲಿ ನಿಮ್ಮ ಜೊತೆಗೆ ಆಗಲು ದುಆ ಮಾಡಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನನ್ನ ಜೊತೆಗೆ ಇರಲು ನಾನು ಆಶಿಸುತ್ತೇನೆ ಮತ್ತು ಅದಕ್ಕಾಗಿ ದುಆ ಮಾಡುತ್ತೇನೆ. ಅಲ್ಲಿದ್ದ ಕೆಲವು ಸಹಾಬಿಯರಲ್ಲಿ ಒಬ್ಬರು ಹೀಗೆ ಹೇಳಿದರು: ಹುಝೂರ್, ನನಗೂ ನಿಮ್ಮ ಜೊತೆಗೆ ಇರಲು ಸೌಭಾಗ್ಯ ಲಭಿಸಲು ದುಆ ಮಾಡಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನಿಮ್ಮ ಮೇಲೂ ಕೃಪೆದೋರಲಿ. ಆದರೆ ಯಾರು ಮೊದಲು ವಿನಂತಿಸಿಕೊಂಡರೋ ಅವರಿಗೆ ಆ ದುಆ ಲಭಿಸಿಯಾಯಿತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ – ಒಮ್ಮೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇಂತಿಂತಹ ಸತ್ಕರ್ಮಗಳನ್ನು ಮಾಡುವವರು ಸ್ವರ್ಗದ ಇಂತಿಂತಹ ಬಾಗಿಲುಗಳ ಮೂಲಕ ಪ್ರವೇಶಿಸುವರು. ವಿವಿಧ ಸತ್ಕರ್ಮಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವರ್ಗದ ಏಳು ಬಾಗಿಲುಗಳಿಂದ ಬೇರೆ ಬೇರೆ ಸತ್ಕರ್ಮಗಳಿಗೆ ಒತ್ತುಕೊಡುವವರು ಬೇರೆ ಬೇರೆ ಬಾಗಿಲುಗಳಿಂದ ಪ್ರವೇಶಿಸುವರು. ಆಗ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಕೇಳಿದರು: ಎಲ್ಲ ಸತ್ಕರ್ಮಗಳಿಗೆ ಒತ್ತುಕೊಡುವವನ ಜೊತೆಗೆ ಹೇಗೆ ವರ್ತಿಸಲಾಗುವುದು? ಹಝ್ರತ್ ಪೈಗಂಬರ್(ಸ) ಹೇಳಿದರು: ಆ ವ್ಯಕ್ತಿ ಸ್ವರ್ಗದ ಪ್ರತಿಯೊಂದು ಬಾಗಿಲುಗಳಿಂದ ಕರೆಯಲ್ಪಡುವನು. ಹೇ ಅಬೂಬಕರ್, ನೀವು ಅಂಥವರಲ್ಲಿ ಆಗಿರುತ್ತೀರಿ ಎಂದು ನನಗೆ ಪ್ರತೀಕ್ಷೆಯಿದೆ.

(ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದಾಗಿ ಪ್ರಸ್ತಾಪಿಸುತ್ತಾ ಹುಝೂರ್ ಕೆಲವು ದಿವಂಗತರ ಬಗ್ಗೆ ವಿವರಿಸಿಕೊಂಡು ಅವರ ಜನಾಝಾ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.)

ಮೊದಲ ಪ್ರಸ್ತಾಪ ಇಂಡೋನೇಶ್ಯ ಜಮಾಅತಿನ ಅಮೀರ್ ಆಗಿದ್ದ ಸನ್ಮಾನ್ಯ ಅಬ್ದುಲ್ ಬಾಸಿತ್ ಸಾಹಿಬ್‌ರದ್ದಾಗಿದೆ. ಅಕ್ಟೋಬರ್ 8ರಂದು 71ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಮೌಲವಿ ಅಬ್ದುಲ್ ವಾಹಿದ್ ಸಮಾಟರಿ ಸಾಹಿಬ್‌ರ ಪುತ್ರರಾಗಿದ್ದರು. ರಬ್ವದ ಜಾಮಿಅ ಅಹ್ಮದಿಯಾದಿಂದ ಶಾಹಿದ್ ಪರೀಕ್ಷೆಯಲ್ಲಿ ಪಾಸಾದರು. ಅನಂತರ ತನ್ನ ದೇಶಕ್ಕೆ ಮರಳಿದರು. ತೈಲೇಂಡಿನಲ್ಲಿ ಮುಬಲ್ಲಿಗ್ ಆಗಿ ಅವರನ್ನು ನಿಶ್ಚಯಿಸಲಾಗಿತ್ತು. ತೈಲಾಂಡಿನಲ್ಲಿ ಸೇವೆ ಸಲ್ಲಿಸಿದ ನಂತರ ಪುನಃ ಇಂಡೋನೇಶ್ಯಕ್ಕೆ ಹೋದರು. ನಿಧನದ ತನಕ ಇಂಡೋನೇಶ್ಯದಲ್ಲೇ ಸೇವೆಯಲ್ಲಿದ್ದರು. ಒಂದು ದೀರ್ಘಕಾಲ ಇಂಡೋನೇಶ್ಯ ಜಮಾಅತಿನ ಅಮೀರ್ ಆಗಿ ಸೇವೆ ಸಲ್ಲಿಸಲು ಅವರು ಸೌಭಾಗ್ಯ ಪಡೆದರು. ಅವರ ಸೇವೆಯ ಕಾಲಾವಧಿ ನಲ್ವತ್ತು ವರ್ಷಗಳಾಗಿದ್ದುವು. ದಿವಂಗತರು ಪತ್ನಿಯನ್ನಲ್ಲದೇ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ದಿವಂಗತರು ಜಮಾಅತಿನ ಬಗ್ಗೆ ಬಹಳ ವೇದನೆಯನ್ನು ಹೊಂದಿದವರೂ ಜಮಾಅತಿನ ಪ್ರತಿಯೊಂದು ಸಂಗತಿಗೆ ಆದ್ಯತೆ ನೀಡುವವರೂ ಆಗಿದ್ದರು. ಮುಬಲ್ಲಿಗರನ್ನು ಬಹಳ ಗೌರವಿಸುತ್ತಿದ್ದರು. ಘನತೆಯುಳ್ಳ ಆದರೆ ವಿನಯದಿಂದ ಕೆಲಸ ಮಾಡುವ ವ್ಯಕ್ತಿಯಾಗಿದ್ದರು. ಖಿಲಾಫತನ್ನು ಮತ್ತು ಜಮಾಅತಿನ ವ್ಯವಸ್ಥೆಯನ್ನು ಬಹಳ ಗೌರವಿಸುತ್ತಿದ್ದರು. ಜಮಾಅತಿನ ಸಂಪತ್ತಿನ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಅವರು ಇಂಡೋನೇಶ್ಯ ಜಮಾಅತಿಗೆ ಆಧ್ಯಾತ್ಮಿಕ ತಂದೆಯಾಗಿದ್ದರು. ಕಠಿಣ ಕ್ರಮ ಕೈಗೊಳ್ಳುವಾಗ ಯಾವಾಗಲೂ ಸುಧಾರಣೆಯನ್ನು ಮುಂದಿರಿಸುತ್ತಿದ್ದರು. ಕಳೆದ ಒಂದು ವರ್ಷದಿಂದ ರೋಗಿಯಾಗಿದ್ದರು. ಆದರೆ ರೋಗಾವಸ್ಥೆಯಲ್ಲೂ ತನ್ನ ಕರ್ತವ್ಯಗಳಲ್ಲಿ ಯಾವುದೇ ಕೊರತೆ ಉಂಟುಮಾಡಿರಲಿಲ್ಲ.

(ದಿವಂಗತರು ಜಮಾಅತಿಗೆ ಮಾಡಿದ ಸೇವೆ ಮತ್ತು ಅವರ ಶ್ರೇಷ್ಠ ಗುಣಗಳ ಬಗ್ಗೆ ಹುಝೂರ್ ವಿಶದವಾಗಿ ಪ್ರಸ್ತಾಪಿಸುತ್ತಾ

ಹೀಗೆ ದುಆ ಮಾಡಿದರು:) ಅಲ್ಲಾಹನು ದಿವಂಗತರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರಂತಹ ಸೇವಕರನ್ನು ಅಲ್ಲಾಹನು ಖಿಲಾಫತಿಗೆ ಸದಾ ದಯಪಾಲಿಸುತ್ತಿರಲಿ.

ಎರಡನೆಯದಾಗಿ ತನ್ಸಾನಿಯ ಜಮಾಅತಿನ ಮುಬಲ್ಲಿಗ್ ಆದ ಯೂಸುಫ್ ಉಸ್ಮಾನ್ ಕಂಬಾಲ ಸಾಹಿಬ್‌ರ ಪತ್ನಿಯಾದ ಝೈನಬ್ ರಮಝಾನ್ ಸಾಹಿಬ. ಅವರು ತನ್ನ 70ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಮೂರನೆಯದಾಗಿ ಖಾದಿಯಾನಿನ ಶೇಖ್ ಅಬ್ದುಲ್‌ಖದೀರ್ ಸಾಹಿಬ್ ದರ್ವೇಶ್‌ರ ಪತ್ನಿ ಹಲೀಮ ಬೇಗಂ ಸಾಹಿಬ. ಅವರು ಕೆಲವು ದಿನಗಳ ಹಿಂದೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಉಪವಾಸ ನಮಾಝ್‌ಗಳನ್ನು ಪಾಲಿಸುವವರೂ, ಸಹನೆಯುಳ್ಳವರೂ ಕೃತಜ್ಞತೆಯುಳ್ಳವರೂ ವಿನಯವಂತರೂ ಹಸನ್ಮುಖರೂ ಆದ ಮಹಿಳೆಯಾಗಿದ್ದರು. ಆರೋಗ್ಯದಲ್ಲಿದ್ದ ಕಾಲದ ವರೆಗೆ ಖಾದಿಯಾನಿನ ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಖಿಲಾಫತಿನೊಂದಿಗೆ ಬಹಳ ಪ್ರೀತಿಯಿತ್ತು. ಖಲೀಫರ ಕಡೆಯಿಂದ ಬರುವ ಪ್ರತಿಯೊಂದು ಯೋಜನೆಯಲ್ಲಿ ಭಾಗಿಯಾಗುತ್ತಿದ್ದರು. ದರ್ವೇಶಿಯ ಕಾಲವನ್ನು ಬಹಳ ಸಹನೆಯಿಂದಲೂ ಕೃತಜ್ಞತೆಯಿಂದಲೂ ಕಳೆದರು. ದಿವಂಗತರು ಮೂಸಿಯಾಗಿದ್ದರು. ಅವರ ಮಗನಾದ ಶೇಖ್ ನಾಸಿರ್ ವಹೀದ್ ಸಾಹಿಬ್ ಖಾದಿಯಾನಿನ ನೂರ್ ಹಾಸ್ಪಿಟಲಿನ ಖಾಇಮ್ ಮಖಾಮ್ ಎಡ್‌ಮಿನಿಸ್ಟ್ರೇಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಮೂವರು ಪುತ್ರಿಯರು ವಿದೇಶದಲ್ಲಿರುವವರು. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತಿನಿಂದ ವರ್ತಿಸಲಿ.

ನಾಲ್ಕನೆಯದಾಗಿ ಸನ್ಮಾನ್ಯ ಮೇಲೇ ಅನೀಸ ಅಪೀಸ ಸಾಹಿಬ. ಅವರು ತನ್ನ 71ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಕರೀಬಾಸ್ ಜಮಾಅತಿನ ಮೊದಲ ಅಹ್ಮದಿಯಾಗಿದ್ದರು. ಹೇಗೋ ಅವರಿಗೆ ಪವಿತ್ರ ಖುರ್‌ಆನಿನ ಒಂದು ಪ್ರತಿ ಲಭಿಸಿತ್ತು. ಅದನ್ನು ಓದಿ ಸ್ವತಃ ಸತ್ಯವಿಶ್ವಾಸ ಕೈಗೊಂಡರು ಮತ್ತು ಪರ್ದಾ ಧರಿಸಲು ಕೂಡ ಶುರುಮಾಡಿದರು. ದಿವಂಗತರು ಬಹಳ ಸಾತ್ವಿಕ, ಧೈರ್ಯಶಾಲಿ, ಸ್ವಾಭಿಮಾನಿ ಮತ್ತು ಆದರಣೀಯ ಅಹ್ಮದಿ ಮಹಿಳೆಯಾಗಿದ್ದರು.

(ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **‘Masjid Mubarak’**, Islamabad, Tilford, UK, on 28-10-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon